and those cases have been investigated by the Deputy Commissioner and the Deputy Commissioner has reported to the Government that he is involved. Inspite of that you are saying that this Chief Officer is not involved. I am very sorry to know that inspite of the Report of the Deputy Commissioner, no action is taken. Will you kindly consider this matter atleast now and see that the corrupt officer is transfered elsewhere as per your promise made on the floor of the House ?

Sri B. BASAVALINGAPPA : No action has been taken as per the report received. I have no objection to give a second look to this and if the officer is really so as alleged by the Hon. Member, I will take serious action.

ಶ್ರೀ ಕೆ. ಎಂ. ನಾಗಣ್ಣ: ನೀವು ಪ್ರಶ್ನೆಗೆ ಉತ್ತರ ಕೊಟ್ಟಿರುವುದಕ್ಕೂ ಈಗ ನೀವು ಉತ್ತರ ಕೊಟ್ಟಿರುವುದಕ್ಕೂ ಹೋಲಿಸಿ ನೋಡಿದರೆ, ತಮ್ಮ ಉತ್ತರ ನೇರವಾಗಿಲ್ಲವೆಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ದಯಮಾಡಿ ಕಂಪ್ಲೇಂಟ್ ಬಂದಮೇಲೆ ಎಷ್ಟು ಜನ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ: ಹೇಗೆ ಹೇಗೆ ಕಂಪ್ಲೇಂಟ್ಸ್ ಬರುತ್ತದೋ ಹಾಗೆ ಹಾಗೆ ತೀರ್ಮಾನ ತೆಗೆದುಕೊಂಡು ವರ್ಗಾವಣೆ ಮಾಡಲಾಗುತ್ತದೆ. ಆದರೆ ಎಷ್ಟು ಜನರನ್ನು ಇದುವರೆಗೆ ವರ್ಗ ಮಾಡಿದೆ ಎಂಬ ಅಂಶವನ್ನು ನಿಖರವಾಗಿ ಈಗ ಹೇಳುವುದಕ್ಕೆ ಆಗುವುದಿಲ್ಲ.

Sri ABDUL KHUDDUS ANWAR : In the light of the complaints which are presented to you, will you kindly take immediate action and see that the corrupt officer is transferred and the Municipality is superseded early ?

Sri B. BASAVALINGAPPA: As I submitted earlier to the House, the reply is received by the Government in response to the notice for supersession. I will take action immediately. Then about this Chief Officer, if he is really corrupt as alleged by the Hon. Member, I do not think he deserves to continue in service. If he is not so, in the usual course, I will transfer him.

LINKING OF BULL TEMPLE AND T.C.M. ROYAN ROAD

280. Sri T. R. SHAMANNA (Fort).—

Will the Minister for Municipal Administration be pleased to state :—

(*a*) whether there is a proposal before Government to link Bull Temple Road and T.C.M. Royan Road leading to Railway Station ;

(*b*) if so, the stage at which the matter stands ;

(*c*) whether Government would take steps to expedite the linking of these roads by acquiring the properties existing in between ?

Sri B. BASAVALINGAPPA (Minister for Municipal Administration).—

(*a*) Yes.

(*b*) Notices under Section 9 and 10 of the Land Acquisition Act were issued to the notified persons to file claim Statements and other documents.

(*c*) Will be considered on its merits if and when proposals are received.

ಶ್ರೀ ಟಿ. ಆರ್. ಶಾಮಣ್ಣ.—ಬುಲ್ ಟೆಂಪಲ್ ರಸ್ತೆಯನ್ನು ಮತ್ತು ರೈಲ್ವೆಸ್ಟೇಷನ್ನಿಗೆ ಹೋಗತಕ್ಕ ಟಿ. ಸಿ. ಎಂ. ರಾಯನ್ ರಸ್ತೆಯನ್ನು ಸೇರಿಸಬೇಕೆಂಬ ಪ್ರೊಪೋಜಲ್ ಕಳೆದ 20 ವರ್ಷಗಳಿಂದಲೂ ಹಾಗೆಯೇ ಇದೆಯೆಂಬ ಅಂಶ ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ? ಅದು ಬಹಳ ಮುಖ್ಯವಾಗಿರುವುದರಿಂದ ಅದರ ಬಗ್ಗೆ ಬೇಗ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುವುದೂ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳಿರತಕ್ಕದ್ದು ವಾಸ್ತವವಾಗಿದೆ. ಇದರ ಬಗ್ಗೆ ನೋಟಿಫಿಕೇಷನ್ 26-11-1959ರಂದು ಹೊರಪಡಿಸಿದ್ದರೂ ಅಲ್ಲಿಂದ ಇಲ್ಲಿಯ ವರೆಗೆ ಹಾಗೆಯೇ ಇದು ತಳ್ಳುತ್ತಾ ಬಂದಿದೆ. ಮಾನ್ಯ ಸದಸ್ಯರು ಈ ವಿಚಾರವನ್ನು ಇವತ್ತು ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಈ ರಸ್ತೆಯನ್ನು ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರಿ ಟಿ. ಆರ್. ಶಾಮಣ್ಣ :—ಈ ವಿಷಯಕ್ಕೆ ಸಂಬಂಧಪಟ್ಟ ಫೈಲು ಮಿಸ್ ಆಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ :—ಅದು ನನ್ನ ಗಮನಕ್ಕೆ ಬಂದಿಲ್ಲ. ಹಳೆಯ ಫೈಲು ಹೋದರೆ ಹೊಸ ಫೈಲನ್ನು ಪ್ರಾರಂಭ ಮಾಡೋಣ.

ಶ್ರೀ ಟಿ. ಆರ್. ಶಾಮಣ್ಣ :—ಈಗಲಾದರೂ ಮಾನ್ಯ ಮಂತ್ರಿಗಳು ಅಲ್ಲಿ ಹೋಗಿ ಇನ್‌ಸ್ಪೆಕ್ಷನ್ ಮಾಡಿ ಆದಷ್ಟು ಜಾಗ್ರತೆಯಾಗಿ ಅದರ ಬಗ್ಗೆ ಕ್ರಮತೆಗೆದುಕೊಳ್ಳಲು ಸರ್ಕಾರ ದವರು ತೀವ್ರ ಪ್ರಯತ್ನಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ : ಅದರ ಬಗ್ಗೆ ಹುಕುಂನ್ನು ಇವತ್ತೇ ಮಾಡುತ್ತೇನೆ.